**ಸಿಸಿ ನಂಃ 1909/2025**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 04-04-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಾದ ಶ್ರೀ ಎನ್.ಎಸ್.ಬಿ ರವರಿಂದಃ**

ರೇಮಂಡ್ಸ ಬ್ರದರ್ಸ ಲಿಯೋ ಎಂಬ ಸಂಸ್ಥೆಯ ಮಾಲೀಕ ನಾನೊಬ್ಬನೇ ಆಗಿದ್ದು ನನ್ನೊಂದಿಗೆ ಬೇರೆ ಯಾರೂ ಮಾಲೀಕರು ಇರುವುದಿಲ್ಲ. ಸದ್ರಿ ಸಂಸ್ಥೆಯ ಮುಖ್ಯ ವ್ಯವಹಾರ ಎಂದರೆ ಹಾರ್ಡವೇರ್ ಸಾಮಾಗ್ರಿಗಳು ಹಾಗೂ ಪೇಂಟ್ ಖರೀದಿ ಮತ್ತು ಮಾರಾಟ ಆಗಿರುತ್ತದೆ. ಸಂಸ್ಥೆಯು ಖರೀದಿ ಮತ್ತು ಮಾರಾಟ ಮಾಡಿರುವುದರ ಬಗ್ಗೆ ಬಿಲ್ಲುಗಳು ಇರುತ್ತವೆ ಎಂದರೆ ಸರಿ. ನೀವು ಯಾವುದೇ ಸಾಮಾಗ್ರಿಗಳನ್ನು ಖರೀದಿಸುವ ಮೊದಲು ಕೊಟೇಶನ್ ಅಥವಾ ಅಂದಾಜು ಬೆಲೆ ಪಟ್ಟಿಯನ್ನು ಪಡೆದುಕೊಳ್ಳುತ್ತೀರಿ ಎಂದರೆ ಸರಿ. ಸಂಸ್ಥೆಯ ಎಲ್ಲಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಲೆಡ್ಜರ್ ಅನ್ನು ನಿರ್ವಹಿಸಿಕೊಂಡು ಬರಲಾಗುತ್ತದೆ ಎಂದರೆ ಸರಿ. ಆ ರೀತಿ ನಿರ್ವಹಿಸುವ ಲೆಡ್ಜರ್ ನಲ್ಲಿ ಆಯ ವ್ಯಯ, ಅಂತಿಮ ಶಿಲ್ಕುಗಳನ್ನು ನಮೂದಿಸಬೇಕಾಗುತ್ತದೆ ಎಂದರೆ ಸರಿ. ಅಂತಹ ಲೆಡ್ಜರ್ ಹಾಗೂ ಲೆಕ್ಕಪತ್ರಗಳನ್ನು ವಾರ್ಷಿಕವಾಗಿ ಲೆಕ್ಕ ಪರಿಶೋಧನೆಗೆ ಒಳಪಡಿಸುತ್ತೇವೆ. ಲೆಕ್ಕ ಪತ್ರಗಳನ್ನು ಹಾಗೂ ಲೆಡ್ಜರ್ ಗಳನ್ನು ನಿಮ್ಮ ಹಾರ್ಡವೇರ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಮಾತ್ರ ಇಡುತ್ತಿರೋ ಅಥವಾ ನಿಮ್ಮ ವೈಯಕ್ತಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಇಡುತ್ತಿರೋ ಎಂದರೆ ಸಾಕ್ಷಿ ಹಾರ್ಡವೇರ್ ವ್ಯವಹಾರ ನನ್ನ ಸ್ವಂತ ಹಾಗೂ ವೈಯಕ್ತಿಕ ಮಾಲೀಕತ್ವದ್ದಾಗಿದ್ದರಿಂದ ವೈಯಕ್ತಿಕ ವ್ಯವಹಾರವನ್ನು ಸಹ ಲೆಕ್ಕ ಪುಸ್ತಕ ಹಾಗೂ ಲೆಕ್ಕಪತ್ರಗಳಲ್ಲಿ ನಮೂದಿಸಲಾಗುತ್ತದೆ ಅಂತಾ ಉತ್ತರಿಸುತ್ತಾರೆ.

2. ನಿಮ್ಮ ಒಟ್ಟು ಆದಾಯಕ್ಕೆ ಸಂಬಂಧಿಸಿದಂತೆ ನೀವು ಆದಾಯ ತೆರಿಗೆ ರಿಟರ್ನನ್ನು ಸಲ್ಲಿಸುತ್ತೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ನಾನು ಸಲ್ಲಿಸಿರುವ ಆದಾಯ ತೆರಿಗೆ ರಿಟರ್ನನಲ್ಲಿ ನಮೂದಿಸಿರುವ ಆದಾಯದ ಹೊರತಾಗಿ ಬೇರೆ ಯಾವುದೇ ಆದಾಯ ನನಗೆ ಇರುವುದಿಲ್ಲ.

3. ನಿಮಗೆ ಆರೋಪಿಯು 2017 ರಿಂದ ಹೇಗೆ ಪರಿಚಯ ಎಂದರೆ ಸಾಕ್ಷಿ ನನ್ನ ಮಗನಿಗೆ ಸೇರಿದ Triune Technologies, Karwar ಎಂಬ ಸಂಸ್ಥೆ ಇದೆ , ಆರೋಪಿಯು Telematics 4U Pvt Ltd company ಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ಮಗನಿಗೆ ಸೇರಿದ Triune Technologies,

Karwar ಸಂಸ್ಥೆಯು ಆರೋಪಿ ಕೆಲಸ ಮಾಡುತ್ತಿದ್ದ ಸದ್ರಿ ಸಂಸ್ಥೆಯೊಂದಿಗೆ Franchise ಹೊಂದಿದ್ದರು. Telematics 4U Pvt Ltd ಯವರು Mines and Geology ಕರ್ನಾಟಕ ಸರ್ಕಾರದವರಿಗೆ GPS Tracking ಮತ್ತು reporting solutions ನೀಡುತ್ತಿದ್ದರು. ನಾವು ಉತ್ತರ ಕನ್ನಡ ಜಿಲ್ಲೆಯಲ್ಲಿ Telematics 4U Pvt Ltd ಕಂಪೆನಿಯ ಪರವಾಗಿ ಕೆಲಸ ನಿರ್ವಹಿಸುತ್ತಿದ್ದೆವು ಆದ್ದರಿಂದ ಆರೋಪಿ ನನಗೆ ಪರಿಚಯ ಅಂತಾ ಉತ್ತರಿಸುತ್ತಾರೆ.

4. ಆರೋಪಿ Triune Technologies, Karwar ಕಂಪೆನಿಯ ಅಧಿಕೃತ ಪ್ರತಿನಿಧಿ ಅಥವಾ ನೌಕರ ಅಂತಾ ತೋರಿಸಲು ಏನಾದರೂ ದಾಖಲೆಯನ್ನು ಅವರಿಂದ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ visiting card ಪಡೆದುಕೊಂಡಿದ್ದೆ ಅಂತಾ ಉತ್ತರಿಸುತ್ತಾರೆ. ಆ visiting card ನ ಆಧಾರದಲ್ಲೇ ಆರೋಪಿಯ ಜೊತೆ ವ್ಯವಹಾರ ಮಾಡುತ್ತಾ ಬಂದಿರುತ್ತೀರಾ ಎಂದರೆ ಸಾಕ್ಷಿ ಆರೋಪಿಯು ಬೆಂಗಳೂರಿನಿಂದ team ತೆಗೆದುಕೊಂಡು ಬರುತ್ತಿದ್ದರು ಅಂತಾ ಉತ್ತರಿಸುತ್ತಾರೆ. ಆರೋಪಿಯು Triune Technologies, Karwar ಬಿಟ್ಟ ನಂತರ Sky 360 solutions ಎಂಬ ಕಂಪೆನಿ ಪ್ರಾರಂಭಿಸಿದ್ದೆ ಅಂತಾ ಉತ್ತರಿಸುತ್ತಾರೆ. ಅವರು ಆ ರೀತಿ ಹೊಸ ಕಂಪೆನಿಯನ್ನು ಪ್ರಾರಂಭಿಸಿರುವ ಬಗ್ಗೆ ದಾಖಲೆಯನ್ನು ಕೊಟ್ಟಿದ್ದಾರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು work order ಹಾಜರುಪಡಿಸಿರುತ್ತೇನೆ ಅಂತಾ ಉತ್ತರಿಸುತ್ತಾರೆ. Sky 360 solutions ಕಂಪೆನಿಯ ಮಾಲೀಕರು ಅಥವಾ ಪಾಲುದಾರರು ಅಂತಾ ತೋರಿಸಲು ನೀವು ಆರೋಪಿಯಿಂದ ಅಧಿಕೃತವಾದ ದಾಖಲೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಅವರು ಪಾನ್ ನಂಬರ್ ಮತ್ತು ಟ್ಯಾನ್ ನಂಬರ್ ಕಳುಹಿಸಿದ್ದರು ಅಂತಾ ಉತ್ತರಿಸುತ್ತಾರೆ. ಅವರು ಕಳುಹಿಸಿದ್ದಾರೆ ಎನ್ನಲಾದ ಪ್ಯಾನ್ ನಂಬರ್ ಹಾಗೂ ಪ್ಯಾನ್ ನಂಬರಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದಾರಾ ಎಂದರೆ ಸಾಕ್ಷಿ ವ್ಯಾಟ್ಸ ಆಪ್ ಸಂದೇಶದ ಪ್ರತಿಯನ್ನು ಹಾಜರುಪಡಿಸಿದ್ದೇನೆ ಅಂತಾ ಉತ್ತರಿಸುತ್ತಾರೆ.

5. ನೀವು ವ್ಯವಹಾರಸ್ಥರಾಗಿರುವ ಕಾರಣ ಯಾರಿಗೆ ಯಾವುದೇ ಹಣ ಸಂದಾಯ ಮಾಡಿದರೆ ಅದನ್ನು ದಾಖಲಿಸಿಕೊಳ್ಳುತ್ತೀರಿ ಎಂದರೆ ಸರಿ.

6. ನೀವು ಆರೋಪಿಗೆ ಹಣ ಪಾವತಿ ಮಾಡಿರುವ ಬಗ್ಗೆ ನಿಮ್ಮ ಲೆಕ್ಕ ಪುಸ್ತಗಳಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಯಾವ ಲೆಕ್ಕದ ಬಾಬ್ತು ಆರೋಪಿ ಹಣ ಕೊಟ್ಟಿದ್ದಾರೆ ಎಂಬುದನ್ನು ಸಹ ಲೆಕ್ಕ ಪುಸ್ತಕದಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಆ ರೀತಿ ನಾನು ಲೆಕ್ಕ ಪುಸ್ತಕಗಳಲ್ಲಿ ನಮೂದಿಸಿಕೊಂಡಿದ್ದೇನೆ. ಅದನ್ನು ಯಾವ ಲೆಕ್ಕಕ್ಕೋಸ್ಕರ ಆರೋಪಿಗೆ ಹಣ ಕೊಟ್ಟಿದ್ದೆ ಎಂಬುದನ್ನು ಹೇಳಬಹುದೇ ಎಂದರೆ ಸಾಕ್ಷಿ ಆರೋಪಿಯು ತನಗೆ Mines and Geology ಇಲಾಖೆಯಿಂದ work order ಸಿಕ್ಕಿದೆ ಆ work order ಅನ್ನು implement ಮಾಡಲು sophisticated Drone Camera , Laptop ಮತ್ತು technology ಬೇಕಾಗಿದ್ದು ಆ ಬಗ್ಗೆ ಹಣ ಬೇಕು ಅಂತಾ ಕೇಳಿದ್ದರು ಅಂತಾ ಉತ್ತರಿಸುತ್ತಾರೆ. ಆ ಬಗ್ಗೆ ನೀವು Mines and Geology ಇಲಾಖೆಯಿಂದ ಮಾಹಿತಿಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಮೌಖಿಕವಾಗಿ ಪರೀಶೀಲಿಸಿಕೊಂಡಿದ್ದೆ ಅಂತಾ ಉತ್ತರಿಸುತ್ತಾರೆ. ಸಾಕ್ಷಿ ಮುಂದುವರಿದು ಆರೋಪಿ ತನಗೆ ಸೇರಿದ ಎನ್ನಲಾದ Sky 360 solutions ಕಂಪೆನಿಯ ಪರವಾಗಿ work order ಪಡೆದುಕೊಂಡಿದ್ದಾರೆ ಎನ್ನುವುದನ್ನು ನಾನು ಖಾತ್ರಿ ಪಡಿಸಿಕೊಂಡಿದ್ದೇನೆ. ಆ ಬಗ್ಗೆ ಏನಾದರೂ ದಾಖಲೆಯನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ work order ಹಾಜರುಪಡಿಸಿದ್ದೇನೆ ಅಂತಾ ಉತ್ತರಿಸುತ್ತಾರೆ. ಆರೋಪಿ ಪಡೆದುಕೊಂಡ work order ವ್ಯವಹಾರ ನಿಮ್ಮ ವೈಯಕ್ತಿಕ ವ್ಯವಹಾರಕ್ಕೆ ಸಂಬಂಧಪಟ್ಟಿದ್ದಲ್ಲ ಎಂದರೆ ಸಾಕ್ಷಿ ವೈಯಕ್ತಿಕ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ ಆದರೆ ಆರೋಪಿ ಸದ್ರಿ work order ಅನ್ನು ಕಾರ್ಯಗತಗೊಳಿಸಲು ಹಣ ಬೇಕು ಅಂತಾ ಕೇಳಿದ್ದಕ್ಕೆ ಹಣ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ.

7. ನೀವು ಆರೋಪಿಗೆ ಕೊಟ್ಟಿದ್ದೀರಿ ಎನ್ನಲಾದ ಹಣವನ್ನು ನಿಮ್ಮ ಹಾರ್ಡವೇರ ಅಂಗಡಿಯ ವ್ಯವಹಾರದಿಂದ ಹಣವನ್ನು ಒಟ್ಟುಗೂಡಿಸಿ ಕೊಟ್ಟಿದ್ದೀರೋ ಅಥವಾ ನಿಮ್ಮ ವೈಯಕ್ತಿಕ ವ್ಯವಹಾರದಿಂದ ಹಣವನ್ನು ಒಟ್ಟುಗೂಡಿಸಿ ಕೊಟ್ಟಿದ್ದೀರೋ ಎಂದರೆ ಸಾಕ್ಷಿ ಹಾರ್ಡವೇರ ಅಂಗಡಿಯ ವ್ಯವಹಾರದ ಹಣ ಹಾಗೂ ಸ್ನೇಹಿತರಿಂದ ಹಾಗೂ ಕುಟುಂಬದ ಸದಸ್ಯರಿಂದ ಹಣವನ್ನು ಸಂಗ್ರಹಿಸಿ ಆರೋಪಿಗೆ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ. ನನಗೆ ಹಾರ್ಡವೇರ ಸಾಮಾಗ್ರಿಗಳ ವ್ಯವಹಾರ ಹಾಗೂ ವೈಯಕ್ತಿಕ ವ್ಯವಹಾರ ಮಾಡಿರುವುದರಿಂದ ಆದಾಯ ತೆರಿಗೆ ಕಾಯ್ದೆ ಯ ಕೆಲವು ಶರತ್ತುಗಳು ಅನ್ವಯಿಸುತ್ತವೆ ಎಂದರೆ ಸರಿ. ನೀವು ನಿಮ್ಮ ಸ್ನೇಹಿತರಿಂದ ಹಾಗೂ ಕುಟುಂಬದ ಸದಸ್ಯರಿಂದ ಹಣವನ್ನು ಸಂಗ್ರಹಿಸಿರುವುದನ್ನು

ದಾಖಲಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ನೀವು ಯಾರಿಂದ ಎಷ್ಟು ಹಣವನ್ನು ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ನಿಮ್ಮ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆ ಇದೆ ಅಂತಾ ಉತ್ತರಿಸುತ್ತಾ ಒಬ್ಬ ಗೆಳೆಯನ ಬಳಿ ಹಾಗೂ ಕುಟುಂಬದವರಿಂದ ಹಣ ತೆಗೆದುಕೊಂಡಿದ್ದೆ ಅಂತಾ ಉತ್ತರಿಸುತ್ತಾರೆ. ಆ ರೀತಿ ಹಣವನ್ನು ನೀವು ನಗದಾಗಿ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ನಗದು ಹಾಗೂ ಬ್ಯಾಂಕ್ ಮೂಲಕ ತೆಗೆದುಕೊಂಡಿದ್ದೇನೆ ಅಂತಾ ಉತ್ತರಿಸುತ್ತಾರೆ. ನಗದಾಗಿ ಎಷ್ಟು ಹಣ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ರೂ.44,00,000/- ನಗದಾಗಿಯೂ, ಬ್ಯಾಂಕ್ ಮೂಲಕ ಅಂದಾಜು ರೂ.5,00,000/- ತೆಗೆದುಕೊಂಡಿದ್ದೆ ಅಂತಾ ಉತ್ತರಿಸುತ್ತಾರೆ. ನಿಮ್ಮ ಸ್ನೇಹಿತನ ಬಳಿ ಎಷ್ಟು ಹಣ ನಗದಾಗಿ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ರೂ.18,00,000/- ನಗದಾಗಿ ತೆಗೆದುಕೊಂಡಿದ್ದೆ ಅಂತಾ ಉತ್ತರಿಸುತ್ತಾರೆ. ನಿಮಗೆ ಹಣ ಕೊಟ್ಟ ಸ್ನೇಹಿತ ಹೆಸರು ಏನು ಎಂದರೆ ಸಾಕ್ಷಿ ಪಿ ವಿ ಪ್ರಜಿತ್ ಅಂತಾ ಉತ್ತರಿಸುತ್ತಾರೆ. ಅವರು ಕಾರವಾರದವರು. ಅವರು ಈಗಲೂ ಸಹ ಜೀವಂತ ಇದ್ದಾರೆ. ಉಳಿದ ಹಣವನ್ನು ನಿಮ್ಮ ಕುಟುಂಬದ ಯಾವ ಸದಸ್ಯರಿಂದ ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ನನ್ನ ಹೆಂಡತಿ ರೇಚಲ್ ಲಿಯೋ ಲೂಯಿಸ್ ರವರಿಂದ ರೂ.11,00,000/- ನಗದು ಹಾಗೂ ನನ್ನ ಮಗ ಲೈನಲ್ ಬಿ ಲೂಯಿಸ್ ರವರಿಂದ ರೂ.9,00,000/- ನನ್ನ ಮಗಳು ಲೋರಾ ಶನನ್ ಲೂಯಿಸ್‌ಳಿಂದ ರೂ.3,00,000/-ನಗದು ಹಾಗೂ ನನ್ನ ಅಳಿಯ ಮನೀಷ್ ಕಿಶೋರ್ ರವರಿಂದ ರೂ.3,00,000/- ಹಣ ತೆಗೆದುಕೊಂಡಿದ್ದೆ ಅಂತಾ ಉತ್ತರಿಸುತ್ತಾರೆ. ಮೇಲೆ ಹೇಳಿದ ನನ್ನ ಕುಟುಂಬದ ಸದಸ್ಯರ ಹಣಕಾಸಿನ ವ್ಯವಹಾರ ನನ್ನ ವ್ಯವಹಾರಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ನೀವು ಹಣ ಪಡೆದುಕೊಂಡ ವ್ಯಕ್ತಿಗಳಿಗೆ ಇಂತಿಷ್ಟೇ ದಿನಗಳಲ್ಲಿ ವಾಪಾಸು ಕೊಡುತ್ತೇನಾಗಿ ಬರವಣಿಗೆ ಮೂಲಕ ಮಾತು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಬರವಣಿಗೆ ಇಲ್ಲ ಬಾಯಿ ಮಾತಿನಲ್ಲಿ ಹೇಳಿದ್ದೆ ಅಂತಾ ಉತ್ತರಿಸುತ್ತಾರೆ. ನಾನು ನನ್ನ ಸ್ನೇಹಿತ ಹಾಗೂ ಕುಟುಂಬದ ಸದಸ್ಯರಿಂದ ಹಣ ಪಡೆದುಕೊಳ್ಳುವಾಗ ಆರೋಪಿ ಇರಲಿಲ್ಲ. ನಿಮ್ಮ ಒಳಗಿನ ವ್ಯವಹಾರಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸಾಕ್ಷಿ ಇದೆ ಅಂತಾ ಉತ್ತರಿಸುತ್ತಾರೆ.

8. ಆರೋಪಿಗೆ ಒಟ್ಟು ರೂಾ. 54,00,000/- ಕೊಟ್ಟಿದ್ದೆ. ಅದನ್ನು ಏಕ ಗಂಟಿನಲ್ಲಿ ಕೊಟ್ಟಿದ್ದೀರಾ ಅಥವಾ ಕಂತಿನಲ್ಲಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಒಮ್ಮೆ ನಗದಾಗಿ ರೂ.20,00,000/-, ರೂ .24,00,000/-

ಬಾಕಿ ರೂ.10,00,000/- ಬ್ಯಾಂಕ್ ಮೂಲಕ ಅಂದರೆ ಚೆಕ್ ಮುಾಲಕ ಹಾಗೂ NEFT ವರ್ಗಾವಣೆ ಮಾಡುವುದರ ಮೂಲಕ ಕೊಟ್ಟಿದ್ದೆ ಅಂತಾ ಉತ್ತರಿಸುತ್ತಾರೆ. ನೀವು ಮೇಲೆ ಹೇಳಿದಂತೆ ಆರೋಪಿಗೆ ಕಂತುಗಳಲ್ಲಿ ಹಾಗೂ ಯಾವ ಯಾವ ದಿನದಂದು ಎಷ್ಟೆಷ್ಟು ಹಣ ಹೇಗೆ ಕೊಟ್ಟಿದ್ದೀರಿ ಎಂಬ ಬಗ್ಗೆ ಫಿರ್ಯಾದಿಯಲ್ಲಿ ನಮೂದಿಸಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸರಿ.

9. ನಿಪಿ-7 ರ ಸಂದೇಶದ ಪ್ರತಿಯಲ್ಲಿ ಯಾವುದೇ ಮೊಬೈಲ್ ನಂಬರು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಹೆಸರು ನಮೂದು ಇದೆ ಅಂತಾ ಉತ್ತರಿಸುತ್ತಾರೆ. ನಿಪಿ-7 ರ ಸಂದೇಶದ ಪ್ರತಿಯಲ್ಲಿ ನೀವು ಕಳುಹಿಸಿರುವ ಯಾವುದೇ ಸಂದೇಶ ಕಂಡುಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಆರೋಪಿ ನಿಮ್ಮಿಂದ ಹಣ ಪಡೆದುಕೊಂಡು ಅದನ್ನು ವಾಪಾಸು ಕೊಡುವುದು ಇದೆ ಅಂತಾ ಎಲ್ಲೂ ಸಹ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ-7 ರಲ್ಲಿ ಆರೋಪಿಯಿಂದ ನಿಮಗೆ ಇಂತಿಷ್ಟು ಹಣ ಬರಬೇಕು ಹಾಗೂ ಆರೋಪಿ ಹಣ ಕೊಡಬೇಕು ಎಂಬ ಬಗ್ಗೆ ಸಂದೇಶ ಕಳುಹಿಸಿರುವುದು ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಕಾಣುವ ಸಂದೇಶಗಳು ನಿಮ್ಮ ಹಾಗೂ ಆರೋಪಿಯ ನಡುವಿನ ಫಿರ್ಯಾದಿಯಲ್ಲಿ ಉಲ್ಲೇಖಿಸಿರುವ ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದ ಸಂದೇಶಗಳಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-10 ರಲ್ಲಿ ಮೊಬೈಲ್ ನಂಬರ್ ಇರುವುದಿಲ್ಲ ಎಂದರೆ ಸರಿ.

10. ಆರೋಪಿಯ ನಡುವೆ ಮಾಡಿಕೊಂಡಿದ್ದೀರಿ ಎನ್ನಲಾದ ಫಿರ್ಯಾದಿಯಲ್ಲಿ ಉಲ್ಲೇಖಿಸಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಭದ್ರತೆಗಾಗಿ ಏನಾದರೂ ದಾಖಲೆಯನ್ನು ಮಾಡಿಕೊಂಡಿದ್ದೀರಾ ಎಂದರೆ ಸಾಕ್ಷಿ ಆರೋಪಿಗೆ ಹಣ ಕೊಟ್ಟ ಬಗ್ಗೆ ದಾಖಲೆಯನ್ನು ಮಾಡಿಕೊಂಡಿದ್ದೇನೆ ಅಂತಾ ಉತ್ತರಿಸುತ್ತಾರೆ. ಅದು ಯಾವುದು ಎಂದರೆ ಸಾಕ್ಷಿ ನಿಪಿ-11 ಅಂತಾ ಉತ್ತರಿಸುತ್ತಾರೆ. ಸಾಕ್ಷಿ ನಿಪಿ-11 ನ್ನು ನೋಡಿ ಅದೇ ದಾಖಲೆ ಅಂತಾ ಉತ್ತರಿಸುತ್ತಾರೆ. ನಿಪಿ-11 ರಲ್ಲಿ ಕಾಣುವ ಕೃಷ್ಣ ಈರಾ ತಾಂಡೇಲ ಯಾರು ಎಂದರೆ ಅವರು ಕಾರವಾರದವರು ಅಂತಾ ಉತ್ತರಿಸುತ್ತಾರೆ. ಅದೇ ರೀತಿ ಉದಯ ಚಾಂದ್ ಗೋವೆಕರ್ ಯಾರು ಎಂದರೆ ಸಾಕ್ಷಿ ಅವರು ಬೆಂಗಳೂರಿನವರು ಅಂತಾ ಉತ್ತರಿಸುತ್ತಾರೆ.ನಿಪಿ-11 ನೀವು ಹೇಳುವ ವ್ಯವಹಾರಕ್ಕೆ ಭದ್ರತೆಯ ದಾಖಲೆ ಎಂದರೆ ಸಾಕ್ಷಿ ಹಣ ಕೊಟ್ಟ ಬಗ್ಗೆ ದಾಖಲೆ ಅಂತಾ ಉತ್ತರಿಸುತ್ತಾರೆ. ನಿಪಿ-11 ರಲ್ಲಿ

**ಸಿಸಿ ನಂಃ 1909/2025**

**ಪಿ. ಡಬ್ಲ್ಯು 1**

ಹಣ ಪಡೆದುಕೊಂಡವರು ಸಹಿ ಮಾಡಿರುತ್ತಾರೆ . ನಿಪಿ–11 ನೋಟರಿಯವರ ಮುಂದೆ ದೃಢೀಕರಿಸಿರುವ ದಾಖಲೆ ಅಲ್ಲ ಎಂದರೆ ಸರಿ. ನಿಪಿ–11ಕ್ಕೆ ಆರೋಪಿ ಎಲ್ಲಿ ಸಹಿ ಮಾಡಿದ್ದಾರೆ ಅಂತಾ ಅದರಲ್ಲಿ ಉಲ್ಲೇಖ ಇದೆಯಾ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಸಹಿ ಮಾಡಿರುವ ಬಗ್ಗೆ ಉಲ್ಲೇಖ ಇದೆ ಅಂತಾ ಉತ್ತರಿಸುತ್ತಾರೆ. ನಿಪಿ–11ರ ಪ್ರಕಾರ ಚೆಕ್ಕನ್ನು ಪಡೆದುಕೊಂಡು ವ್ಯವಹಾರ ಮಾಡಲು ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ಚೆಕ್ಕು ನಂತರ ಕೊಟ್ಟಿರುವುದು ಅಂತಾ ಉತ್ತರಿಸುತ್ತಾರೆ.ಹಣವನ್ನು ಚೆಕ್ಕು ಮೂಲಕ ಕೊಡುವ ಬಗ್ಗೆ ನಿಪಿ–11ರಲ್ಲಿ ಉಲ್ಲೇಖ ಇರುವುದಿಲ್ಲ ಎಂದರೆ ಸಾಕ್ಷಿ ಇಲ್ಲಾ ಅಂತಾ ಉತ್ತರಿಸುತ್ತಾರೆ.

11. ನಿಪಿ–11ರಲ್ಲಿ ಹೇಳಿರುವ ಕಂಪೆನಿಯನ್ನು ಪ್ರತಿನಿಧಿಸುವ ಬಗ್ಗೆ ಸದ್ರಿ ಕಂಪೆನಿಗೆ ಯಾರು ಯಾರು ಪಾಲುದಾರರು ಇದ್ದಾರೆ ಎಂಬ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಆರೋಪಿ ತಾನೊಬ್ಬನೇ ಮ್ಯಾನೇಜಿಂಗ್ ಪಾರ್ಟನರ್ ಹಾಗೂ ಇನ್ನೊಬ್ಬ ಪಾರ್ಟನರ್ ಇದ್ದಾರೆ ಅಂತಾ ಹೇಳಿರುತ್ತಾರೆ ಅಂತಾ ಉತ್ತರಿಸುತ್ತಾರೆ. ಇನ್ನೊಬ್ಬ ಪಾರ್ಟನರ್ ಯಾರು ಎಂಬ ಬಗ್ಗೆ ದಾಖಲೆ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಮೌಖಿಕವಾಗಿ ಮಾತನಾಡಿಕೊಂಡಿದ್ದೇವೆ ಅಂತಾ ಉತ್ತರಿಸುತ್ತಾರೆ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಡಲಾಗಿದೆ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಕಾರವಾರ.**